LEGISLATIVE ASSEMBLY.

FIFTH DAY.

Wednesday, 22nd March 1950.

The Assembly met in the Assembly Hall, Old Public Offices, Bangalore, at Three Minutes past One of the Clock.

Mr. Speaker (Sri V. Venkatappa) in the Chair.

STARRED QUESTIONS

(to which oral answers were given).

Mr. SPEAKER (Sri V. Venkatappa).—Questions. Question No. 26.

Agricultural Inspectors.

*Q. 26—**Sri M. GOVINDA REDDY** (Chitaldrug District—General).—

Will the Government be pleased to state :—

(*a*) the number of Agricultural Inspectors in the State;

(*b*) their grades with their respective salaries ;

(*c*) number of promotions annually in each grade ?

A.—**Sri T. MARIAPPA** (Home Minister).—

(*a*) 151.

(*b*) There are two grades for Agricultural Inspectors :

(1) For Graduate Inspectors Rs. 100-8-140-10-200.

(2) For Non-Graduate Inspectors Rs. 55-5-100-10-150.

(*c*) The grades have been revised recently and no promotions from Non-Graduates' to Graduates' grade have been made so far.

Sri M. GOVINDA REDDY.—In answer to sub-section (*a*), the number of Agricultural Inspectors have been given as 151. May I know how many of them are graduate Inspectors and how many are non-graduate Inspectors ?

***Sri T. MARIAPPA.**—Does the Hon'ble Member want the number of posts or the number actually filled up ?

Sri M. GOVINDA REDDY.—I want to know the number of graduate Inspectors and the number of non-graduate Inspectors.

Sri T. MARIAPPA.—The total number of graduate Inspectors is 38 and that of non-graduate Inspectors is 113.

Sri M. GOVINDA REDDY.—May I know the number in service and the grades in which they are placed ?

Sri T. MARIAPPA.—The number in service are—

Graduate Inspectors 28 and non-graduate Inspectors 96.

Sri M. GOVINDA REDDY.—In the scale of graduate Inspectors how many are there on Rs. 100-8-140 and how many are there on Rs. 140-10-200 ?

Sri T. MARIAPPA.—There are no two scales as Rs. 100-8-140 and 140-10-200. Rs. 100 to 200 is a running scale and the total number of graduate Inspectors in that scale is 28.

Sri M. GOVINDA REDDY.—May I know how many are drawing between Rs. 100 and Rs. 140 and how many are drawing between Rs. 140 and Rs. 200 in that scale ?

Sri T. MARIAPPA.—I want notice to answer that question. It requires a lot of labour.

Sri M. GOVINDA REDDY.—Amongst the non-graduate Inspectors may I know how many are drawing between Rs. 55 and Rs. 100 and how many are drawing between Rs. 100 and Rs. 150 ?

Sri T. MARIAPPA.—The total number of non-graduate Inspectors in the running scale of Rs. 55-5-100-10-150 is 96. But if the Hon'ble Member wants to know as to how many are on Rs. 55 and how many are on Rs. 100 and how many are on 150, I want notice to answer them.

Sri M. GOVINDA REDDY.—Can the Hon'ble Minister give me the number promoted in these scales for the last three years?

Sri T. MARIAPPA.—The question is not clear. May I request the Hon'ble Member to put the question again?

Sri M. GOVINDA REDDY.—I want to know the number of Inspectors who are promoted from scale to scale each year for the last three years.

Sri T. MARIAPPA.—I want notice to answer that question.

Sri M. GOVINDA REDDY.—Will the Hon'ble Minister agree that the scale of Rs. 55-5-100 is a low scale of salary for Agricultural Inspectors?

Sri T. MARIAPPA.—That scale is meant only for non-graduate Agricultural Inspectors.

Sri M. GOVINDA REDDY.—Even for non-graduate Agricultural Inspectors, is that not a low scale of salary?

Sri T. MARIAPPA.—No. It is not a low scale of salary for the non-graduate Agricultural Inspectors.

Sri M. GOVINDA REDDY.—Has it come to the notice of the Hon'ble Minister that several Inspectors have represented to the Minister for Agriculture that the salaries given to them are low?

Sri T. MARIAPPA.—The present one is a revised scale.

Sri M. GOVINDA REDDY.—Has it come to the notice of the Government that these Agricultural Inspectors have prayed before the Minister for Agriculture that their scale of pay be enhanced to bring it on a par with those of the Inspectors of Police and Excise?

Sri T. MARIAPPA.—The Inspectors of Police are all graduates.

Sri M. GOVINDA REDDY.—Are the Government aware that there is dissatisfaction and discontent prevailing among the non-graduate Agricultural Inspectors with regard to their scales of pay?

Sri T. MARIAPPA.—There is no discontent at all.

Sri M. GOVINDA REDDY.—Have not the non-graduate Agricultural Inspectors made representations to the Minister for Agriculture with regard to their low scale of salaries?

Sri T. MARIAPPA.—In fact, it is after taking into consideration all the available data that the scale has been revised to Rs. 55—5—100—10—150.

Sri M. GOVINDA REDDY.—May I know if the Government consider that the scale of pay of non-graduate Inspectors is satisfactory?

Sri T. MARIAPPA.—That scale of pay is considered satisfactory for non-graduate Agricultural Inspectors.

Sri M. GOVINDA REDDY.—Will the Government consider this question sympathetically if a representation is made by the non-graduate Agricultural Inspectors that for the work expected of them they are drawing a low scale of salary?

Sri T. MARIAPPA.—Certainly. Government will always take a sympathetic view of the matter.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ 151 ಜನ ಇನ್ಸ್‌ಪೆಕ್ಟರುಗಳ ಪೈಕಿ ಬಿ. ಎಸ್‌ಸಿ. (ಅಗ್ರಿಕಲ್ಚರ್) ಡಿಗ್ರಿ ಪಡೆದಿರುವವರೆಷ್ಟು ಜನ, ಅಗ್ರಿಕಲ್ಚರ್ ವಿನಾ ಬೇರೆ ಡಿಗ್ರಿ ಪಡೆದಿರುವವರೆಷ್ಟು ಜನ?

ಶ್ರೀ ಟಿ. ಮರಿಯಪ್ಪನವರು.—ಆ ರೀತಿ ವಿಭಾಗ ಮಾಡಿ ಹೇಳುವುದಕ್ಕಾಗುವುದಿಲ್ಲ; ವ್ಯವಸಾಯದ ಕಾಲೇಜಿನಿಂದ ತೇರ್ಗಡೆಯಾದವರಲ್ಲಿ ನಾವು ತೆಗೆದು ಕೊಂಡಿರುವುದು 17 ಜನ.

ಶ್ರೀ ಎಸ್. ರಂಗರಾಮಯ್ಯನವರು.—ವ್ಯವಸಾಯದ ಕಾಲೇಜಿನಲ್ಲಿ ಈ ಸಾರಿ ಮೊದಲನೆಯ ತಂಡದವರಾಗಿ ತೇರ್ಗಡೆಯಾದವರೆಲ್ಲರಿಗೂ ಈಗ ಕೆಲಸ ಸಿಕ್ಕಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಬಹಳ ಜನರಿಗೆ ಸಿಕ್ಕಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಅವರಲ್ಲಿ ಇನ್ನೂ ಬಾಕಿ ಇದ್ದಾರೆಯೇ?

ಶ್ರೀ ಟಿ. ಮರಿಯಪ್ಪನವರು.—ಇರಬಹುದು, ಆದರೆ ಅವರು ಇನ್ನೂ ಏನೇನು ಆಶೋತ್ತರಗಳನ್ನಿಟ್ಟುಕೊಂಡಿದ್ದಾರೋ ಗೊತ್ತಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಆ ಕಾಲೇಜಿಗೆ ಸೇರಿದ ಮೊದಲನೆಯ ತಂಡದವರಿಗೆ ಕೆಲಸಕ್ಕೆ ತೊಂದರೆಯಾಗಿರುವುದರಿಂದ ಈಗ ವ್ಯವಸಾಯದ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಸಂಖ್ಯೆಯೇನೂ ಕಡಿಮೆಯಾಗಿಲ್ಲ. ಎಲ್ಲೋ ಎರಡು ಮೂರು ಸ್ಥಾನಗಳು ಖಾಲಿ ಇವೆ, ಅಷ್ಟೆ.

ಶ್ರೀ ಎಸ್. ರಂಗರಾಮಯ್ಯನವರು.—ತೇರ್ಗಡೆಯಾದವರ ಪೈಕಿ ಯಾರಾದರೂ ಕೆಲವರು ಜಮೀನುಗಳನ್ನು ಸ್ವಂತವಾಗಿ ಮಾಡಬೇಕೆಂದು ಹೇಳಿ ತಮ್ಮ ಜಮೀನುಗಳನ್ನು ಕೇಳಿದರೆ ಅಂಥವರಿಗೆ ಉತ್ತೇಜನ ಕೊಡುತ್ತಿದ್ದೀರಾ?

ಅಧ್ಯಕ್ಷರು.—ತಾವು ಸಲಹೆಯನ್ನು ಕೊಡುತ್ತಾ ಇದ್ದೀರಿ, ಇದನ್ನು ಬೇಕಾದರೆ ಜೋತಾ ನೂಚನೆಗಳ ನಂಬಂಧದಲ್ಲಿ ಕೇಳಿ, ವಿಷಯ ತಿಳಿಯಲು ತಮಗೆ ಅವ

ಕಾಶವಿದೆ. ಆದ್ದರಿಂದ, ಈಗ ಪ್ರಶ್ನೋತ್ತರಗಳ ಕಾಲದಲ್ಲಿ ಸಲಹೆಗಳನ್ನು ಕೊಡುವುದು ಸರಿಯಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಅಂಥವರು ಯಾರಾದರೂ ಇದ್ದಾರೆಯೇ ಎಂದು ಕೇಳುತ್ತಿದ್ದೇನೆ, ಅಷ್ಟೆ.

ಶ್ರೀ ಟಿ. ಮರಿಯಪ್ಪನವರು.—ಸ್ವಂತವಾಗಿ ವ್ಯವಸಾಯ ಮಾಡುತ್ತೇವೆಂದು ಹೇಳಿ ಕೆಲವರು ಕೇಳಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಅಂಥವರಿಗೆ ತಾವು ಉತ್ತೇಜನ ಕೊಡುತ್ತೀರಾ ?

ಶ್ರೀ ಟಿ. ಮರಿಯಪ್ಪನವರು.—ಅಗತ್ಯವಾಗಿ ಕೊಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಗ್ರೇಡ್ ರಿವೈಸ್ ಮಾಡಿದ್ದು ಯಾವಾಗ ?

Sri T. MARIAPPA.—Very recently.

ಶ್ರೀ ಟಿ. ಮಾದಯ್ಯಗೌಡರು.—ಅಂದರೆ, ಸುಮಾರು ಆರು ತಿಂಗಳಿಂದೀಚೆಗೆ ಎಂದು ಭಾವಿಸಬಹುದೇ ?

ಶ್ರೀ ಟಿ. ಮರಿಯಪ್ಪನವರು.—ಜನರಲ್ ರಿವಿಷ್ಡ್ ಆಗಿ ಸುಮಾರು ಒಂದು ವರ್ಷವಾಗಿದೆ.

ಶ್ರೀ ಟಿ. ಮಾದಯ್ಯಗೌಡರು.—ರಿವಿಷ್ಡ್ ಆಗುವುದಕ್ಕೆ ಮೊದಲು ಗ್ರೇಡ್ ಯಾವ ರೀತಿ ಇತ್ತು ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಟಿ. ಮಾದಯ್ಯಗೌಡರು.—ಈಗ ಹೊಸದಾಗಿ ತಾವು ಗ್ರಾಜುಯೇಟ್ ಇಕ್ಸ್‌ಟೆನ್ಷನ್ ಆಫೀಸರುಗಳನ್ನು ತೆಗೆದುಕೊಂಡಿದ್ದೀರಿ. ಆದರೆ ಗ್ರಾಜುಯೇಟ್‌ಗಳಲ್ಲದೆ ಬಹಳ ಕಾಲದಿಂದ ಕೆಲಸ ಮಾಡುತ್ತಿರುವ ಮತ್ತು ಹೆಚ್ಚು ಅನುಭವವನ್ನು ಪಡೆದಿರುವ ಇಕ್ಸ್‌ಟೆನ್ಷನ್ ಆಫೀಸರುಗಳಿಗೆ ಹೆಚ್ಚು ವೇತನ ಬರುತ್ತದೆಯಲ್ಲವೆ ?

ಶ್ರೀ ಟಿ. ಮರಿಯಪ್ಪನವರು.—ಈಗ ಅರ್ಹತೆಯ ಮೇರೆ ಸ್ಕೇಲನ್ನು ನಿಗದಿ ಮಾಡಿದ್ದಾರೆ, ಆದ್ದರಿಂದ ಅನುಭವ, ಹೆಚ್ಚು ಪರಿಶ್ರಮ ಮತ್ತು ಜ್ಞಾನ ಪಡೆದಿರುವ ಗ್ರಾಜುಯೇಟ್ ಮತ್ತು ಗ್ರಾಜುಯೇಟುಗಳಲ್ಲದವರಿಗೂ ಬೇರೆ ಸ್ಕೇಲನ್ನು ಮಾಡಿರುತ್ತಾರೆ.

ಶ್ರೀ ಟಿ. ಮಾದಯ್ಯಗೌಡರು.—ನಮ್ಮಲ್ಲಿ ಹತ್ತಾರು ವರ್ಷಗಳಿಂದ ಇಲಾಖೆಯಲ್ಲಿ ಕೆಲಸ ಮಾಡಿ 50–60 ರೂಪಾಯಿ ಸಂಬಳ ತೆಗೆದುಕೊಳ್ಳುವವರಿಗೆ, ಇನ್ನೂ ಈಚೆಗೆ ಗ್ರಾಜುಯೇಟ್ ಆಗಿಬಂದಿರುವವರಿಗೆ ಕೊಟ್ಟಿರುವುದಕ್ಕಿಂತ ಕಡಮೆ ಸಂಬಳ ಬಂದಿರುವುದರಿಂದ, ಅವರ ಮನಸ್ಸಿಗೆ ಅಸಮಾಧಾನವುಂಟಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು —ಅದು ಅಭಿಪ್ರಾಯದ ಮಾತು. ಅಸಮಾಧಾನವುಂಟಾಗಿಲ್ಲವೆಂದು ಸರ್ಕಾರ ತಿಳಿದುಕೊಂಡಿದೆ.

ಶ್ರೀ ಟಿ. ಮಾದಯ್ಯಗೌಡರು.—ಈ ಗ್ರೇಡನ್ನು ರಿವೈಸ್ ಮಾಡಿದ ಮೇಲೆ ಎಷ್ಟು ವರ್ಷ ಕೆಲಸ ಮಾಡಿದ್ದಾರೆ, ಎಷ್ಟು ದಕ್ಷತೆಯಿಂದ ಕೆಲಸಮಾಡುತ್ತಾರೆ, ಎಂಬುದನ್ನು ವಿಮರ್ಶೆ ಮಾಡಿ ಅದಕ್ಕೆ ತಕ್ಕ ಹಾಗೆ ತಾವು ಗ್ರಾಜುಯೇಟುಗಳಲ್ಲದ ಇಕ್ಸ್‌ಟೆನ್ಷನ್ ಆಫೀಸರುಗಳಿಗೆ ಸಂಬಳವನ್ನು ಆಯಾ ಗ್ರೇಡಿನಲ್ಲಿ ಗೊತ್ತುಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

Mr. SPEAKER.—The Hon'ble Member is making a suggestion.

Sri T. MARIAPPA.—It is a hypothetical question. Each question is considered on merits. If the person is really competent, he will be encouraged.

ಶ್ರೀ ಬಿ. ಎಕ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಹತ್ತಾರು ವರ್ಷಗಳಿಂದ ವ್ಯವಸಾಯದ ಇಲಾಖೆಯಲ್ಲಿ ಕೆಲಸ ಮಾಡುತ್ತಾ, ಇಕ್ಸ್‌ಟೆನ್ಷನ್ ಆಫೀಸರ್ ಗ್ರೇಡಿನಲ್ಲಿದ್ದವರಲ್ಲಿ ಕೆಲವರನ್ನು ಅಸಿಸ್ಟೆಂಟ್ ಡೈರೆಕ್ಟರುಗಳಾಗಿ ನೇಮಕ ಮಾಡಿದ್ದೀರಾ ?

Mr. SPEAKER.—That does not arise.

ಶ್ರೀ ಬಿ. ಎಕ್, ಬೋರಣ್ಣಗೌಡರು.—ತಮ್ಮ ಗ್ರೇಡನ್ನು ಹೆಚ್ಚು ಮಾಡಬೇಕೆಂದು ಕೆಲವು ವರ್ಷಗಳಿಂದ ಕೇಳುತ್ತಿರುವುದನ್ನು ಗಮನಿಸಿ ಅದನ್ನು ಹೆಚ್ಚಿಸಲು ಪ್ರಯತ್ನಪಟ್ಟಿದ್ದೀರಾ ?

ಶ್ರೀ ಟಿ. ಮರಿಯಪ್ಪನವರು.—ಈಗ ಉತ್ತರದಲ್ಲಿ ತಿಳಿಸಿರುವುದು ರಿವೈಸ್ ಆದ ಸ್ಕೇಲೆಂದು ಹೇಳಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡರು.—ಯಾವಾಗ ರಿವೈಸ್ ಮಾಡಲಾಯಿತು ?

ಶ್ರೀ ಟಿ. ಮರಿಯಪ್ಪನವರು.—ಸುಮಾರು ಒಂದು ವರ್ಷದ ಕೆಳಗೆ.

ಶ್ರೀ ಬಿ. ಎಕ್. ಬೋರಣ್ಣಗೌಡರು.—10 ವರ್ಷಗಳಿಂದ ಬಡ್ತಿ ಇಲ್ಲದೆಯಿರುವವರಿಗೆ ಬಡ್ತಿಯನ್ನು ಅದಕ್ಕೆ ತಕ್ಕಂತೆ ಕೊಡುತ್ತೀರಾ ?

ಶ್ರೀ ಟಿ. ಮರಿಯಪ್ಪನವರು.—ಈಗ ಕೊಟ್ಟಿರುವ ಹೊಸ ಸ್ಕೇಲಿನಲ್ಲಿ ಸರ್ವಿಸ್ಸಿಗೆ ತಕ್ಕಂತೆ ಬಡ್ತಿ ಖಂಡಿತ ದೊರೆಯುತ್ತದೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ವ್ಯವಸಾಯ ಇಲಾಖೆ ಇಕ್ಸ್‌ಟೆನ್ಷನ್ ಆಫೀಸರುಗಳಾಗಿರುವವರು ವ್ಯವಸಾಯದ ಬಾಬಿನಲ್ಲಿ ತರಬೇತನ್ನು ಪಡೆದಿದ್ದಾರೆಯೆ ?

ಶ್ರೀ ಟಿ. ಮರಿಯಪ್ಪನವರು.—ವ್ಯವಸಾಯದ ಸ್ಕೂಲಿನಲ್ಲಿ ತೇರ್ಗಡೆ ಆಗಿರುವವರೂ ಇದ್ದಾರೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ತರಬೇತಾಗದಿರುವವರೂ ಇದ್ದಾರೆಯೆ ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ನಮ್ಮ ಅಗ್ರಿಕಲ್ಚರಲ್ ಕಾಲೇಜಿನ ಗ್ರಾಜುಯೇಟ್‌ಗಳಲ್ಲದವರನ್ನೂ ತೆಗೆದುಕೊಂಡಿದ್ದೀರಾ ?

ಶ್ರೀ ಟಿ. ಮರಿಯಪ್ಪನವರು.—ಬೇರೆ ಅಗ್ರಿಕಲ್ಚರಲ್ ಕಾಲೇಜುಗಳ ಗ್ರಾಜುಯೇಟುಗಳನ್ನೂ ತೆಗೆದುಕೊಂಡಿದ್ದೇವೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ—ನಿಮ್ನ ಪಂಗಡ).—ನಮ್ಮ ಗ್ರಾಜುಯೇಟ್ ಇಕ್ಸ್‌ಟೆನ್ಷನ್ ಆಫೀಸರುಗಳ ಕೆಲಸ ಮತ್ತು ಗ್ರಾಜುಯೇಟ್ ಅಲ್ಲದ ಇಕ್ಸ್‌ಟೆನ್ಷನ್ ಆಫೀಸರುಗಳ ಕೆಲಸ ಎಲ್ಲಾ ಒಂದೇ ಸಮನೆ ತಾನೆ ?

ಶ್ರೀ ಟಿ. ಮರಿಯಪ್ಪನವರು.—ಅಲ್ಲ; ದಕ್ಷತೆಗೆ ತಕ್ಕಂತೆ ಕೆಲಸವಿರುತ್ತದೆ.

ಶ್ರೀ ಟಿ. ಹನುಮಯ್ಯನವರು.—ವ್ಯವಸಾಯದ ಇಲಾಖೆಯಲ್ಲಿ ಗ್ರಾಜುಯೇಟ್ ಇಕ್ಸ್‌ಟೆನ್ಷನ್ ಆಫೀಸರುಗಳು ಏನು ಕೆಲಸ ಮಾಡುತ್ತಾರೋ ಗ್ರಾಜುಯೇಟ್ ಅಲ್ಲದ ಇಕ್ಸ್‌ಟೆನ್ಷನ್ ಆಫೀಸರುಗಳೂ ಅದೇ ಕೆಲಸ ತಾನೆ ಮಾಡುವುದು ?

ಶ್ರೀ ಟಿ. ಮರಿಯಪ್ಪನವರು.—ಅದು ಊಹಾ ಪ್ರಶ್ನೆ ಆಯಿತು. ಆ ಕೆಲಸಕ್ಕೆ ಗ್ರಾಜುಯೇಟ್ ಮತ್ತು ಗ್ರಾಜುಯೇಟ್ ಅಲ್ಲದವರನ್ನೂ ಹಾಕುತ್ತೇವೆ.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ ಗ್ರಾಜುಯೇಟ್ ಇಕ್ಸ್‌ಟೆನ್ಷನ್ ಆಫೀಸರುಗಳಿಗೆ ಮತ್ತು ಗ್ರಾಜುಯೇಟ್ ಅಲ್ಲದಿರುವ ಇಕ್ಸ್‌ಟೆನ್ಷನ್ ಆಫೀಸರುಗಳಿಗೆ ಏನು ಕೆಲಸ ಕೊಡುತ್ತೀರಿ ?

ಶ್ರೀ ಟಿ. ಮರಿಯಪ್ಪನವರು.—ಅದು ಆಯಾ ಸ್ಥಳದ ಮೇರೆ ಹೋಗುತ್ತದೆ. ಸಾಯಿಲ್ ಸರ್ವೆ, ಮಲ್ಟಿಪ್ಲಿಕೇಷನ್ ಆಫ್ ಸೀಡ್ಸ್ ಮುಂತಾದ ಕೆಲಸಗಳನ್ನು

ನಿರ್ಮಿಸಬೇಕಾಗುತ್ತದೆ. ಅದಕ್ಕೆ ಅನುಭವವಿರುವವರನ್ನು ನೋಡಿ ಹಾಕುತ್ತೇವೆ.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ ಗ್ರಾಜುಯೇಟ್ ಇಕ್ಸ್‌ಪೆರ್ಟಿಗೆ ಅನುಭವ ಜಾಸ್ತಿ, ಗ್ರಾಜುಯೇಟ್ ಅಲ್ಲದವರಿಗೆ ಅನುಭವ ಕಡಮೆ ಎಂದು ಭಾವಿಸಬಹುದೆ?

ಶ್ರೀ ಟಿ. ಮರಿಯಪ್ಪನವರು.—ಗ್ರಾಜುಯೇಟುಗಳಿಗೆ ಜ್ಞಾನ ಮತ್ತು ಅನುಭವ ಇರುತ್ತದೆ. ಗ್ರಾಜುಯೇಟುಗಳಲ್ಲದವರಿಗೆ ಅಷ್ಟು ಓದದಿರುವುದರಿಂದ ಜ್ಞಾನಾನುಭವ ಕಡಿಮೆ.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ, ಓದಿದ ಮಾತ್ರಕ್ಕೇ ಜ್ಞಾನ ಕೆಚ್ಚಾಗಿದೆಯೆಂದು ಹೇಳಬಹುದೆ?

ಶ್ರೀ ಟಿ. ಮರಿಯಪ್ಪನವರು.—ನಾನು ಹಾಗೆ ಹೇಳಲಿಲ್ಲ. ಹೀಗೆ ಪ್ರಶ್ನೆ ಮಾಡುವುದು ಕ್ವಾಸ್ ಎಕ್ಸಾಮಿನೇಷನ್ ಆಗುತ್ತದೆ.

ಶ್ರೀ ಟಿ. ಹನುಮಯ್ಯನವರು.—ಈ ಕಾಲದಲ್ಲಿ ಆಹಾರಾಭಾವ ಜಾಸ್ತಿ ಇರುವುದರಿಂದ ಇಕ್ಸ್‌ಪೆರ್ಟ್‌ಗಳವರ ಕೆಲಸ ಜಾಸ್ತಿಯೆಂಬುದನ್ನು ಒಪ್ಪುತ್ತೀರಾ?

Mr. SPEAKER.—That question does not arise. Next question. Question No. 39.

Starting of Dairy Farms

*Q.—39. Sri B. HUTCHE GOWDA (Tumkur District—General).—Will the Government be pleased to state.—

(*a*) the amount sanctioned by them as grant or as subsidy for starting dairy farms in the State during the previous three years;

(*b*) the names and addresses of the parties, the amount sanctioned to each and the terms and conditions of the grant relating to each;

(*c*) the names of the parties whose applications are rejected and the reasons for rejecting them;

(*d*) the names of parties whose applications are pending and the dates of their pending applications?

A.—Sri T. MARIAPPA (Home Minister).—

(*a*) Nil,

(*b*) Does not arise in view of reply to clause (*a*).

(*c*) Sri B. S. Aswatha Murthy, C/o B. S. Doraswamy, Bangalore. For the reason that there is no provision.

(*d*) Nil.

ಶ್ರೀ ಬಿ. ಹುಚ್ಚೇಗೌಡರು.—(*a*) ಪ್ರಶ್ನೆಗೆ ಉತ್ತರ ಏನಾಗಿ ಸಬ್ಸಿಡಿ ಕೊಟ್ಟಿಲ್ಲವೆಂದು ಹೇಳಿದ್ದೀರಿ. ಹಾಗಾದರೆ ಸಾಲ ಕೊಟ್ಟಿರುವುದೆಷ್ಟು?

*ಶ್ರೀ ಟಿ. ಮರಿಯಪ್ಪನವರು.—ಗ್ರಾಂಟು ಮತ್ತು ಸಬ್ಸಿಡಿ ಕೊಟ್ಟಿಲ್ಲ. ಸಾಲ ಕೊಟ್ಟಿರುವುದು ಎಷ್ಟೆಂದು ಸಳುವುದಕ್ಕೆ ನೋಟೀಸ್ ಬೇಕು.

ಶ್ರೀ ಬಿ. ಹುಚ್ಚೇಗೌಡರು.—ಒಟ್ಟು ಪೊತ್ತವನ್ನಾದರೂ ಹೇಳಬಲ್ಲರಾ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಡೈರಿ ಫಾರಂಗೆ ಸಾಲ ಕೊಡಬೇಕೆಂದು ಸರ್ಕಾರದವರು ನಿರ್ಧಾರ ಮಾಡಿದ್ದಾರೆಯೆ?

ಶ್ರೀ ಟಿ. ಮರಿಯಪ್ಪನವರು.—ಯೋಜನೆಯಿದೆ.

ಶ್ರೀ ಎಸ್. ಕರಿಯಪ್ಪನವರು.—ಮುಂಜೂರು ಮಾಡುತ್ತಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಕೆಲವರಿಗೆ ಕೊಟ್ಟಿದೆ.

ಶ್ರೀ ಎಸ್. ಕರಿಯಪ್ಪನವರು.—ಮುಂದಿನ ವರ್ಷಕ್ಕೆ ಅಲಾಟ್‌ಮೆಂಟ್ ಮಾಡಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್. ಬಡ್ಡೆಟ್‌ತಮ್ಮ ಕೈಲೇ ಇದೆ.

ಶ್ರೀ ಎಸ್. ಕರಿಯಪ್ಪನವರು.—ಹಾಗಾದರೆ ಅಲಾಟ್‌ಮೆಂಟ್ ಮಾಡಿ ಎಂದು ನಾನು ಹೇಳುವುದಾದರೆ ಅದನ್ನು ಒಪ್ಪುತ್ತೀರಾ?

(ಉತ್ತರವಿಲ್ಲ.)

Sri H. M. CHANNABASAPPA.—Do the Government grant subsidies for starting dairy farms?

ಶ್ರೀ ಟಿ. ಮರಿಯಪ್ಪನವರು.—ಇಲ್ಲ ಎಂದು ಉತ್ತರ ಕೊಟ್ಟಿದೆ.

Extent of cultivation of paddy and dry crops.

*Q.—54. Sri T. SUBRAMANYA (Tumkur District—General).—

Will the Government be pleased to state:—

(*a*) the number of acres of wet land that was cultivated and paddy grown during the current year;

(*b*) the estimated and actual yield from them;

(*c*) the acreage of dry crop in the current year;

(*d*) the estimated and actual yield?

A.—Sri T. MARIAPPA (Home Minister).—

(*a*) 748,382 acres.

(*b*) Estimated yield is 4,677,422 pallas of paddy. Final estimates are not yet ready.

(*c*) Ragi ... 1,874,604 acres
Jola ... 327,835 ,,
Minor Millets 362,978 ,,

(*d*) Estimated yield is as follows:—

Ragi ... 4,048,697 pallas
Jola ... 478,453 ,,
Minor Millets 382,826 ,,

Final estimates are not yet ready.